ದೂರವಾಣಿ ಸಂಖ್ಯೆ : 2419677/2419361
ಫ್ಯಾಕ್ಸ್: 0821-2419363/2419301

e-mail : registrar@uni-mysore.ac.in
www.uni-mysore.ac.in

ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ : 1916

ವಿಶ್ವವಿದ್ಯಾನಿಲಯ ಕಾರ್ಯಸೌಧ,
ಕ್ರಾಫರ್ಡ್ ಭವನ, ಮೈಸೂರು-570005

ಸಂಖ್ಯೆ: ಎಸಿ2(ಎಸ್)/143/2004-05

ದಿನಾಂಕ: 12.10.2026

ಸುತ್ತೋಲೆ

ವಿಷಯ:- ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮೈಸೂರು ಜಿಲ್ಲೆಯಲ್ಲಿರುವ ಶೈಕ್ಷಣಿಕ ಸಂಸ್ಥೆಗಳು/ಕಾಲೇಜುಗಳ ಮಾಹಿತಿಯನ್ನು ನೀಡುವ ಬಗ್ಗೆ

ಉಲ್ಲೇಖ:1. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ,ಬನ್ನೇರು ಘಟ್ಟ ರಸ್ತೆ, ಬೆಂಗಳೂರು

2. ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ, ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಾರ್ಯಾಲಯ,ಮೈಸೂರು, ಇವರ ಪತ್ರ ಸಂಖ್ಯೆ:ಸಂ.ಜಿ.ಕೌ.ಆ.ಮೈ/ಟ್ರೈನಿಂಗ್/ಸ್ಕಿಲ್/2026-27/168,ದಿನಾಂಕ:07.10.2026

*****

ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ ತರಬೇತಿ ಅವಶ್ಯಕತೆಗಳ ಗುರುತಿಸುವಿಕೆ, ಕೈಗಾರಿಕಾ ಸಂಪರ್ಕ ಹಾಗೂ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಉದ್ದೇಶದಿಂದ ಜಿಲ್ಲೆಯಲ್ಲಿರುವ ಶೈಕ್ಷಣಿಕ/ಸಂಸ್ಥೆಗಳು/ಕಾಲೇಜುಗಳು ಹಾಗೂ ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳು, ಬ್ಯಾಂಕುಗಳ ಮತ್ತು ಇತರೆ ಸಂಸ್ಥೆಗಳ ಸಮಗ್ರ ಮಾಹಿತಿಯನ್ನು ನೀಡುವಂತೆ ಉಲ್ಲೇಖಿತ(01)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಕೌಶಲ್ಯಭವನ, ಬೆಂಗಳೂರು ಇವರು ತಿಳಿಸಿದ್ದು, ಇದರನ್ವಯ ನಿಗದಿತ ನಮೂನೆಯಲ್ಲಿ ಕೇಳಿರುವ ಮಾಹಿತಿಯನ್ನು ಭರ್ತಿಮಾಡಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ, ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಾರ್ಯಾಲಯ, ಮೈಸೂರು ಇವರ ಕಛೇರಿಗೆ ಮಾಹಿತಿಯನ್ನು ನೀಡುವಂತೆ ಕೋರಿರುತ್ತಾರೆ.

ಈ ಹಿನ್ನಲೆಯಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಹಾಗೂ ಅಧೀನಕ್ಕೊಳಪಟ್ಟ ಘಟಕ/ಸಂಯೋಜಿತ/ಸರ್ಕಾರಿ/ಖಾಸಗಿ/ಅನುದಾನಿತ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರುಗಳು ಉಲ್ಲೇಖ(2) ರಲ್ಲಿ (ಪ್ರತಿ ಲಗತ್ತಿಸಿದೆ.) ಅದರಂತೆ ನಮೂನೆಯಲ್ಲಿ ಮಾಹಿತಿಗಳನ್ನು ಭರ್ತಿಮಾಡಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಇವರಿಗೆ ಕಳುಹಿಸಿ, ಅದರ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ.

I/c ಕುಲಸಚಿವರು
ಕುಲಸಚಿವರು
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಇವರಿಗೆ;

1. ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು, ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಾರ್ಯಾಲಯ,ನಂ.5/1, ವಿನೋಬಾ ರಸ್ತೆ, ಮಾನಸಗಂಗೋತ್ರಿ, ಮೈಸೂರು.
2. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಎಲ್ಲಾ ಸ್ನಾತಕ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.
3. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಕುಲಸಚಿವ(ಪರೀಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ನಿರ್ದೇಶಕರು, ಯೋಜನೆ, ಉಸ್ತುವಾರಿ ಮತ್ತು ಮೌಲ್ಯಮಾಪನ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಆಡಳಿತಾಧಿಕಾರಿಗಳು, ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು.
8. ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ, ಮಾನಸಗಂಗೋತ್ರಿ
9. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ವಿಭಾಗ, ಮಾನಸಗಂಗೋತ್ರಿ, ಮೈಸೂರು.
10. ವಿಶೇಷಾಧಿಕಾರಿಗಳು, ಕುಲಪತಿಗಳ ಕಛೇರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
11. ಸಂಯೋಜಕರು, ಐ.ಸಿ.ಡಿ., ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು- ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕಾಗಿ ಕೋರಿದೆ.
12. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ) ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
13. ಕಛೇರಿ ಪ್ರತಿ.

ಕುಲಸಚಿವರ ಕಛೇರಿ
ಮೈ ವಿ. ವಿ ಮೈಸೂರು
ಒಳಬಂದ ಸಂ. RP-237
9/10/26

445

ಕರ್ನಾಟಕ ಸರ್ಕಾರ
ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ
ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಾರ್ಯಾಲಯ, ಸಂ: 5/1, ವಿನೋಬಾ ರಸ್ತೆ, ಮಾನಸಗಂಗೋತ್ರಿ,
ಪ್ರೀಮಿಯರ್ ಸ್ಟುಡಿಯೋ ಎದುರು, ಮೈಸೂರು-570006
E-mail ID:-dsdomysore@gmail.com Ph No:- 0821-2970815

ಸಂ.ಜಿ.ಕೌ.ಅ.ಮೈ//ಟ್ರೈನಿಂಗ್/ಸ್ಕಿಲ್/2026-27/168 ದಿನಾಂಕ:07.10.2026

ರವರಿಗೆ,

1. ಜಂಟಿ ನಿರ್ದೇಶಕರು, ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರ, ಮೈಸೂರು ಜಿಲ್ಲೆ, ಮೈಸೂರು.
2. ರಿಜಿಸ್ಟರ್ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಪ್ರಾದೇಶಿಕ ಜಂಟಿ ನಿರ್ದೇಶಕರು ಕಾಲೇಜು ಶಿಕ್ಷಣ ಇಲಾಖೆ, ಮೈಸೂರು.
4. ಡಿ.ಹೆಚ್.ಓ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ,ಮೈಸೂರು.
5. ಡಿ.ಡಿ.ಪಿ.ಐ. ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು.
6. ನಿರ್ದೇಶಕರು, ವಿಶ್ವೇಶ್ವರಯ್ಯ ತಾಂತ್ರಿಕ ಶಿಕ್ಷಣ, ಮೈಸೂರು. ಜಿಲ್ಲೆ, ಮೈಸೂರು.
7. ಜಂಟಿ ನಿರ್ದೇಶಕರು ಜಿಲ್ಲಾ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಮೈಸೂರು.
8. ಮುಖ್ಯ ವ್ಯವಸ್ಥಾಪಕರು, ಮಾರ್ಗದರ್ಶಿ ಬ್ಯಾಂಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮೈಸೂರು ಜಿಲ್ಲೆ, ಮೈಸೂರು.

ಮಾನ್ಯರೆ,

ವಿಷಯ: ಮೈಸೂರು ಜಿಲ್ಲೆಯಲ್ಲಿರುವ ಶೈಕ್ಷಣಿಕ ಸಂಸ್ಥೆಗಳು/ಕಾಲೇಜುಗಳು ಹಾಗೂ ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳು, ಬ್ಯಾಂಕುಗಳು ಮತ್ತು ಇತರ ಸಂಸ್ಥೆಗಳ ವಿವರಗಳನ್ನು ಸಲ್ಲಿಸುವ ಕುರಿತು.

ಉಲ್ಲೇಖ: ವ್ಯವಸ್ಥಾಪಕ ನಿರ್ದೇಶರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಕೌಶಲ್ಯಭವನ, ಬೆಂಗಳೂರುರವರ ಪತ್ರ ಸಂ: ಕೆ.ಎಸ್.ಡಿ.ಸಿ./ಟಿ.ಆರ್.ಜಿ/ ಸ್ಕಿಲ್/ ಸಿ.ಆರ್.21/ 2026-27 ದಿನಾಂಕ:30.09.2026.

AC2(5)

****

ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ ತರಬೇತಿ ಅವಶ್ಯಕತೆಗಳ ಗುರುತಿಸುವಿಕೆ, ಕೈಗಾರಿಕಾ ಸಂಪರ್ಕ ಹಾಗೂ ಉದ್ಯೋಗಾವಕಾಸಗಳನ್ನು ಹೆಚ್ಚಿಸುವ ಉದ್ದೇಶದಿಂದ ಜಿಲ್ಲೆಯಲ್ಲಿರುವ ಶೈಕ್ಷಣಿಕ ಸಂಸ್ಥೆಗಳು/ಕಾಲೇಜುಗಳು ಹಾಗೂ ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳು, ಬ್ಯಾಂಕುಗಳು ಮತ್ತು ಇತರ ಸಂಸ್ಥೆಗಳ ಸಮಗ್ರ ಮಾಹಿತಿಯನ್ನು ನೀಡುವಂತೆ ಉಲ್ಲೇಖಿತ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶರು, ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ, ಕೌಶಲ್ಯಭವನ, ಬೆಂಗಳೂರುರವರು ತಿಳಿಸಿದ್ದು ಅದರನ್ವಯ ನಿಗಧಿತ ನಮೂನೆಯಲ್ಲಿ ನಿಮ್ಮ ಇಲಾಖೆ ವ್ಯಾಪ್ತಿಗೆ ಬರುವ ಮಾಹಿತಿಯನ್ನು ಜರೂರು ನೀಡಲು ಕೋರಲಾಗಿದೆ.

DC/AC

ಅಡಕ: ಉಲ್ಲೇಖಿತ ನಮೂನೆಯನ್ನು ಲಗತ್ತಿಸಿದೆ.

Supdt. (AC)

699
9.10.26

09/10

ತಮ್ಮ ವಿಶ್ವಾಸಿ,

ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ
ಮೈಸೂರು ಜಿಲ್ಲೆ, ಮೈಸೂರು.

ಅನುಬಂಧ–I (Annexure–I)

ಜಿಲ್ಲೆಯಲ್ಲಿರುವ ಶೈಕ್ಷಣಿಕ ಸಂಸ್ಥೆಗಳು / ಕಾಲೇಜುಗಳ ವಿವರಗಳು

ಕ್ರ.ಸಂ.	ಸಂಸ್ಥೆ / ಕಾಲೇಜಿನ ಹೆಸರು	ಸಂಪೂರ್ಣ ವಿಳಾಸ	ತಾಲ್ಲೂಕು	ಸಂಸ್ಥೆಯ ವಿಧ (ಸರ್ಕಾರಿ/ಖಾಸಗಿ/ ಅನುದಾನಿತ ಇತ್ಯಾದಿ)	ಕೋರ್ಸ್‌ಗಳು / ಪ್ರಮುಖ ವಿಭಾಗಗಳು	ಸಂಪರ್ಕ ವ್ಯಕ್ತಿಯ ಹೆಸರು ಮತ್ತು ಹುದ್ದೆ	ಮೊಬೈಲ್ ಸಂಖ್ಯೆ	ಇ-ಮೇಲ್ ವಿಳಾಸ	ಅಂದಾಜು ವಿದ್ಯಾರ್ಥಿಗಳ ಸಂಖ್ಯೆ	ಕೌಶಲ್ಯ ತರಬೇತಿಗೆ ಆಸಕ್ತಿ / ಅಗತ್ಯವಿರುವ Job Roles	ಷರಾ
1											
2											
3											
4											
5											

ಜಿಲ್ಲೆ: ____________________

ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಯ ಸಹಿ: ____________________

ಕಚೇರಿ ಮುದ್ರೆ: ____________________

ದಿನಾಂಕ: ____________________

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ
ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ
(ಕರ್ನಾಟಕ ಸರ್ಕಾರದ ಅಧೀನಕ್ಕೊಳಪಟ್ಟಿದೆ)
ಕೌಶಲ್ಯ ಭವನ, 3ನೇ ಮಹಡಿ, ಡೈರಿ ಸರ್ಕಲ್, ಬನ್ನೇರುಘಟ್ಟ ರಸ್ತೆ,
ಬೆಂಗಳೂರು-560029
E-Mail ID : skilldev.2017@gmail.com Ph No:- 080-29522222

ಕೌಶಲ
ಕರ್ನಾಟಕ

ಸಂಖ್ಯೆ:KSDC/Trg/Skill/CR-21/2026-27 ದಿನಾಂಕ: 30.09.2026

ಗೆ,

ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ (DSDO),
ರಾಜ್ಯದ ಎಲ್ಲಾ ಜಿಲ್ಲೆಗಳು.

ವಿಷಯ : ಜಿಲ್ಲೆಯಲ್ಲಿರುವ ಶೈಕ್ಷಣಿಕ ಸಂಸ್ಥೆಗಳು/ಕಾಲೇಜುಗಳು ಹಾಗೂ ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳು, ಬ್ಯಾಂಕುಗಳು ಮತ್ತು ಇತರ ಸಂಸ್ಥೆಗಳ ವಿವರಗಳನ್ನು ಸಂಗ್ರಹಿಸಿ ಸಲ್ಲಿಸುವ ಕುರಿತು.

ಉಲ್ಲೇಖ: ದಿನಾಂಕ 25.09.2026ರಂದು ಎಲ್ಲಾ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳೊಂದಿಗೆ (DSDOs) ನಡೆದ ಸಭೆ.

*****

ಮೇಲ್ಕಂಡ ಉಲ್ಲೇಖಿತ ಸಭೆಯಲ್ಲಿ ಚರ್ಚಿಸಿದಂತೆ, ಜಿಲ್ಲೆಯಲ್ಲಿ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ, ತರಬೇತಿ ಅವಶ್ಯಕತೆಗಳ ಗುರುತಿಸುವಿಕೆ, ಕೈಗಾರಿಕಾ ಸಂಪರ್ಕ ಹಾಗೂ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಉದ್ದೇಶದಿಂದ ಜಿಲ್ಲೆಯಲ್ಲಿರುವ ಶೈಕ್ಷಣಿಕ ಸಂಸ್ಥೆಗಳು/ಕಾಲೇಜುಗಳು ಹಾಗೂ ಕೈಗಾರಿಕೆಗಳು, ವಾಣಿಜ್ಯ ಸಂಸ್ಥೆಗಳು, ಬ್ಯಾಂಕುಗಳು ಮತ್ತು ಇತರ ಸಂಸ್ಥೆಗಳ ಸಮಗ್ರ ಮಾಹಿತಿಯನ್ನು ಸಂಗ್ರಹಿಸುವ ಅಗತ್ಯವಿದೆ.

ಈ ಹಿನ್ನೆಲೆಯಲ್ಲಿ, ತಮ್ಮ ಜಿಲ್ಲೆಯ ಎಲ್ಲಾ ತಾಲ್ಲೂಕುಗಳನ್ನು ಒಳಗೊಂಡಂತೆ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಕಾಲೇಜುಗಳು, ವಿಶ್ವವಿದ್ಯಾಲಯಗಳು, ಪಾಲಿಟೆಕ್ನಿಕ್‌ಗಳು, ITIಗಳು, ಎಂಜಿನಿಯರಿಂಗ್ ಕಾಲೇಜುಗಳು, ನರ್ಸಿಂಗ್ ಮತ್ತು ಪ್ಯಾರಾಮೆಡಿಕಲ್ ಸಂಸ್ಥೆಗಳು ಹಾಗೂ ಇತರ ಸಂಬಂಧಿತ ಶೈಕ್ಷಣಿಕ ಸಂಸ್ಥೆಗಳ ವಿವರಗಳನ್ನು ಸಂಗ್ರಹಿಸುವಂತೆ ಕೋರಲಾಗಿದೆ. ಅದೇ ರೀತಿ, ಜಿಲ್ಲೆಯಲ್ಲಿರುವ ಕೈಗಾರಿಕೆಗಳು, MSMEಗಳು, IT/ITeS ಸಂಸ್ಥೆಗಳು, ಬ್ಯಾಂಕುಗಳು ಹಾಗೂ ಹಣಕಾಸು ಸಂಸ್ಥೆಗಳು, ವಾಣಿಜ್ಯ ಸಂಸ್ಥೆಗಳು, ಆಸ್ಪತ್ರೆಗಳು, ಹೋಟೆಲ್‌ಗಳು, ಲಾಜಿಸ್ಟಿಕ್ಸ್ ಮತ್ತು ಸಾರಿಗೆ ಸಂಸ್ಥೆಗಳು, ನಿರ್ಮಾಣ ಸಂಸ್ಥೆಗಳು ಹಾಗೂ ಇತರ ಉದ್ಯೋಗಾವಕಾಶ ಹೊಂದಿರುವ ಸಂಸ್ಥೆಗಳ ವಿವರಗಳನ್ನೂ ಸಂಗ್ರಹಿಸಬೇಕಾಗಿದೆ.

ಸಂಗ್ರಹಿಸುವ ಮಾಹಿತಿಯಲ್ಲಿ ಸಂಸ್ಥೆಯ ಹೆಸರು, ಸಂಸ್ಥೆಯ ಪ್ರಕಾರ/ವಲಯ, ಸಂಪೂರ್ಣ ವಿಳಾಸ, ತಾಲ್ಲೂಕು, ಸಂಪರ್ಕ ವ್ಯಕ್ತಿಯ ಹೆಸರು ಮತ್ತು ಹುದ್ದೆ, ಮೊಬೈಲ್ ಸಂಖ್ಯೆ, ಇ-ಮೇಲ್ ವಿಳಾಸ, ವಿದ್ಯಾರ್ಥಿಗಳು/ಉದ್ಯೋಗಿಗಳ ಅಂದಾಜು ಸಂಖ್ಯೆ, ಸಂಬಂಧಿತ ಕೌಶಲ್ಯ/ಉದ್ಯೋಗ ಪಾತ್ರಗಳು ಹಾಗೂ ತರಬೇತಿ, ಉದ್ಯೋಗ ನಿಯೋಜನೆ ಅಥವಾ ಕೈಗಾರಿಕಾ ಸಂಪರ್ಕಕ್ಕೆ ಸಂಬಂಧಿಸಿದ ಅವಕಾಶಗಳ ವಿವರಗಳನ್ನು ಒಳಗೊಂಡಿರಬೇಕು.

ಈ ಮಾಹಿತಿಯು ಜಿಲ್ಲಾವಾರು ಕೌಶಲ್ಯಾಭಿವೃದ್ಧಿ ಯೋಜನೆ, ತರಬೇತಿ ಕಾರ್ಯಕ್ರಮಗಳ ವಿನ್ಯಾಸ, ಕೈಗಾರಿಕಾ ಸಂಪರ್ಕ ಹಾಗೂ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಮುಂದಿನ ಕ್ರಮಗಳಿಗೆ ಬಳಸಲಾಗುವುದರಿಂದ, ಸಂಪೂರ್ಣ ಹಾಗೂ ನಿಖರವಾದ ಮಾಹಿತಿಯನ್ನು ಎಲ್ಲಾ ತಾಲ್ಲೂಕುಗಳನ್ನು

ಒಳಗೊಂಡಂತೆ ಸಂಗ್ರಹಿಸಿ, ನಿಗದಿತ ನಮೂನೆಯಲ್ಲಿ ದಿನಾಂಕ:29.10.2026 ರೊಳಗಾಗಿ ಸಲ್ಲಿಸುವಂತೆ ಕೋರಲಾಗಿದೆ.

ಲಗತ್ತು:

1. ಅನುಬಂಧ -01: ಶೈಕ್ಷಣಿಕ ಸಂಸ್ಥೆಗಳು/ಕಾಲೇಜುಗಳ ವಿವರಗಳ ನಮೂನೆ.
2. ಅನುಬಂಧ-02: ಕೈಗಾರಿಕೆಗಳು/ವಾಣಿಜ್ಯ ಸಂಸ್ಥೆಗಳು/ಬ್ಯಾಂಕುಗಳು ಹಾಗೂ ಇತರೆ ಸಂಸ್ಥೆಗಳ ವಿವರಗಳ ನಮೂನೆ.

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ